# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 17.10.2022 ರಂದು ಬೆಳಗ್ಗೆ 11.00 ಗಂಟೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಯಶವಂತಪುರ ಉಪ ವಿಭಾಗ, 2ನೇ ಮಹಡಿ, ಬಿಬಿಎಂಪಿ ವಾಣಿಜ್ಯ ಸಂಕೀರ್ಣ (ಆರ್‌ಟಿಓ ಕಾಂಪ್ಲೆಕ್ಸ್), ಯಶವಂತಪುರ ಇಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಮೊ. ಸಂ. |
|---|---|---|---|---|
| 1 | ಶ್ರೀ ಎಂ. ವಿಘ್ನೇಶ್ವರ | ಸ.ಕಾ.ನಿ.ಅ., | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | 9480688220 |
| 2 | ಹೇಮ ಎಸ್.ಟಿ. | ಸಹಾಯಕ ಅಭಿಯಂತರರು | ಸದಸ್ಯರು | 9480688037 |
| 3 | ಪ್ರಕಾಶ್ | ಕಂದಾಯ ಪರಿವೀಕ್ಷಕರು | ಸದಸ್ಯರು | |
| 4 | ರಂಜಿತ್ | ಕಿ.ಆ.ಪ. | ಸದಸ್ಯರು | |
| 5 | ನಾಗಮಣಿ | ಪ್ರಾ.ಆ.ಕೇಂ. | ಸದಸ್ಯರು | 7353484044 |
| 6 | ನೇತ್ರಾವತಿ | ಪ್ರಾ.ಆ.ಕೇಂ. | ಸದಸ್ಯರು | 7353416408 |
| 7 | ಮಂಜುನಾಥ್ | ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆ ಪರವಾಗಿ | ಸದಸ್ಯರು | 9164747167 |
| 8 | ಮೋಹನ್ ಕುಮಾರ್ | ಬೆಸ್ಕಾಂ | ಸದಸ್ಯರು | 7411453983 |
| 9 | ಮುರಳಿ | ಮೇಲ್ವಿಚಾರಕರು | ಸದಸ್ಯರು | 9739837711 |
| 10 | ಸತ್ಯವತಿ | ಲಿಂಕ್ ವರ್ಕರ್ | ಸದಸ್ಯರು | 8971674635 |
| 11 | ಸುಜಾತ | ಲಿಂಕ್‌ವರ್ಕರ್ | ಸದಸ್ಯರು | |
| 12 | ಕಾಂತರಾಜು | ಮಾರ್ಷಲ್ | ಸದಸ್ಯರು | 8105287135 |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

1) ಕಾಮಗಾರಿ ಇಲಾಖೆ:

ವಾರ್ಡ್‌ನಲ್ಲಿ ಕೆಲವೊಂದು ರಸ್ತೆಗಳಲ್ಲಿ ಸಣ್ಣದಾದ ರಸ್ತೆಗುಂಡಿಗಳು ಕಂಡುಬಂದಿದ್ದು, ಕೂಡಲೇ ಅದನ್ನು ಮುಚ್ಚಲು ಸಂಬಂಧಪಟ್ಟ ವಾರ್ಡ್ ಸಹಾಯಕ ಅಭಿಯಂತರರಿಗೆ ರಸ್ತೆಗುಂಡಿಗಳನ್ನು ಮುಚ್ಚಲು ತುರ್ತಾಗಿ ಕ್ರಮಕೈಗೊಳ್ಳಲು ಸೂಚಿಸಿದರು.

ಡಿಸಿಲ್ಟಿಂಗ್ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ಸಿಲ್ಟ್ & ಟ್ರ್ಯಾಕ್ಟರ್ ಕಾಮಗಾರಿಯು ಶೀಘ್ರದಲ್ಲಿ ಪ್ರಾರಂಭವಾಗುವುದು ಎಂದು ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.

ರೈಲ್ವೆ ಸಮಾನಾಂತರ ರಸ್ತೆ ಹಾಗೂ ಬಿ ಕೆ ನಗರ ಮುಖ್ಯರಸ್ತೆಯಲ್ಲಿ ರಬ್ಬರ್ ಹಂಪ್ಸ್‌ಗಳನ್ನು ಹಾಕುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ನೋಡಲ್ ಅಧಿಕಾರಿಗಳಿಗೆ ತಿಳಿಸಿದರು.

2) ಘನತ್ಯಾಜ್ಯ ನಿರ್ವಹಣೆ ವಿಭಾಗ:

ಹಸಿ ಕಸ ಹಾಗೂ ಒಣ ಕಸ ವಿಂಗಡಣೆ ಮಾಡಲು ಹಾಗೂ ಮಳಿಗೆಗಳಲ್ಲಿ ಪ್ಲಾಸ್ಟಿಕ್ ನಿಷೇದ ಮಾಡುವಂತೆ ಜನರಲ್ಲಿ ಅರಿವನ್ನು ಮೂಡಿಸುತ್ತಿರುವುದಾಗಿ ಲಿಂಕ್ ವರ್ಕರ್ಸ್ ನೋಡಲ್ ಅಧಿಕಾರಿಗಳಿಗೆ ತಿಳಿಸಿದರು.

3) ಮಾರ್ಷಲ್ :

350 ಕೆ ಜಿ ಪ್ಲಾಸ್ಟಿಕ್ ಸೀಜ್ ಮಾಡಿ, ದಂಡ ವಿಧಿಸಿರುವುದಾಗಿ ನೋಡಲ್ ಅಧಿಕಾರಿಗಳಿಗೆ ತಿಳಿಸಿದರು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಬ್ಲ್ಯಾಕ್ ಸ್ಪಾಟ್‌ಗಳು ಹೆಚ್ಚಾಗಿದ್ದು, ರಾತ್ರಿ ವೇಳೆಯಲ್ಲಿ ಕಸ ಹಾಕುವವರಿಗೆ ದಂಡ ಹಾಕಲು ಸೂಚಿಸಿದರು.

4) ಆರೋಗ್ಯ :

ಸರ್ವೆ ಟೆಸ್ಟಿಂಗ್‌ಗಳು ನಡೆಸಲಾಗಿದ್ದು, ಆಸ್ಪತ್ರೆಯಲ್ಲಿ ಡೆಂಗ್ಯೂ, ಮಲೇರಿಯಾ ಪ್ರಕರಣಗಳು ಯವುದೂ ದಾಖಲಾತಿ ಇರುವುದಿಲ್ಲ.

5) ಬಿಡಬ್ಲ್ಯೂಎಸ್‌ಎಸ್‌ಬಿ:-

ಈಗಾಗಲೇ ತಿಳಿಸಿದಂತೆ, ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ತಮ್ಮ ಇಲಾಖೆಯಿಂದ ಮಾಡಿದ ರಸ್ತೆ ಅಗೆತದ ಕಾಮಗಾರಿ ನಂತರ ರೆಸ್ಟೋರೇಷನ್ ಮಾಡಲು ತಿಳಿಸಿದರು.

6) ಬೆಸ್ಕಾಂ :

ವಾರ್ಡ್‌ನಲ್ಲಿ ಕಂಡುಬರುತ್ತಿರುವ ಎಲೆಕ್ಟ್ರಿಕಲ್ ಪೋಲ್ಸ್‌ಗಳನ್ನು ಶೀಘ್ರವಾಗಿ ತೆರವುಗೊಳಿಸಬೇಕೆಂದು ನೋಡಲ್ ಅಧಿಕಾರಿಗಳು ಹಾಜರಾಗಿದ್ದ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು.

7) ಕಂದಾಯ ಇಲಾಖೆ :

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ಪ್ರತಿ ತಿಂಗಳ ಕಂದಾಯ ವಸೂಲಾತಿ ವರದಿಯನ್ನು ಸಲ್ಲಿಸಿರುತ್ತಾರೆ. ಹಾಗೂ ಮುಂದಿನ ಸಭೆಯಲ್ಲಿ ಖಾತೆಗೆ ಸಂಬಂಧಿಸಿದ ವಿವರವನ್ನು ಸಲ್ಲಿಸಬೇಕೆಂದು ನೋಡಲ್ ಅಧಿಕಾರಿಗಳು ಹಾಜರಾಗಿದ್ದ ಕಂದಾಯ ಇಲಾಖೆಯವರಿಗೆ ತಿಳಿಸಿದರು.

8) ವಾರ್ಡ್ ಸಮಿತಿ ಸದಸ್ಯರು ಗೈರು ಹಾಜರಿ ಬಗ್ಗೆ:

ವಾರ್ಡ್-37ರಲ್ಲಿ ನಡೆಸುವ ವಾರ್ಡ್ ಸಮಿತಿ ಸಭೆಗೆ ವಿವಿಧ ಇಲಾಖೆಯ ಅಧಿಕಾರಿಗಳು ಗೈರು ಹಾಜರಾಗಿರುವುದನ್ನು ಗಂಭೀರವಾಗಿ ಪರಿಗಣಿಸಿದೆ.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Hema S.T
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

(ಎಂ. ವಿಷ್ಣೇಶ್ವರ)
ಸ.ಕಾ.ನಿ.ಅ.-ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:37